ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

4

ಇಲಾಖೆ / ವಿಷಯ : DEPARTMENT / SUBJECT: ಕೋವಿಡ್-19, 2ನೇ ಅಲೆ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ    ದಿನಾಂಕ : DATE : 12/4/21

# ಮತ್ತೆ ಲಾಕ್ ಶಾಕ್?

## ಸಚಿವ ಸುಧಾಕರ್‌ರಿಂದಲೇ ಸುಳಿವು

ಬೆಂಗಳೂರು: ಕೊರೊನಾ ಸೋಂಕು ಪ್ರಕರಣಗಳು ದಾಖಲೆ ಪ್ರಮಾಣದಲ್ಲಿ ಪತ್ತೆಯಾಗುತ್ತಿದ್ದು, ರಾಜ್ಯವು ಮತ್ತೆ 'ಲಾಕ್‌ಡೌನ್'ನ ಕೂಪಕ್ಕೆ ತಳ್ಳಲ್ಪಡುವುದೇ ಎಂಬ ಅನುಮಾನ ಮೂಡಿದೆ. ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಅವರೂ ಇದಕ್ಕೆ ಪುಷ್ಟಿ ನೀಡುವಂತೆ ಮಾತನಾಡಿದ್ದು, ರಾಜ್ಯದಲ್ಲಿ ಲಾಕ್‌ಡೌನ್ ಹೇರುವ ಸುಳಿವನ್ನು ನೀಡಿದ್ದಾರೆ.

ಭಾನುವಾರ 'ಲಸಿಕೆ ಉತ್ಸವ'ಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, 'ಸೋಂಕು ನಿಯಂತ್ರಣಕ್ಕೆ ಬಾರದ ದೇಶ, ರಾಜ್ಯಗಳು ಲಾಕ್‌ಡೌನ್ ಮೊರೆ ಹೋಗಿದ್ದು, ಅಂತಹ ಪರಿಸ್ಥಿತಿ ಕರ್ನಾಟಕಕ್ಕೆ ಬರಬಾರದು ಎಂದರೆ ಎಲ್ಲರೂ ಮಾರ್ಗಸೂಚಿ ಪಾಲಿಸಬೇಕು. ಸೋಂಕಿನ ಹತೋಟಿಗೆ ಕಠಿಣ ನಿಯಮ ಜಾರಿಗೊಳಿಸಲೇಬೇಕಾಗುತ್ತದೆ. ಹಾಗಂತ ಒಮ್ಮೆಗೇ ಲಾಕ್‌ಡೌನ್ ಜಾರಿ ಸಾಧ್ಯವಾಗುವುದಿಲ್ಲ, ಒಂದೊಂದೇ ಹೆಜ್ಜೆ ಇಟ್ಟಿದ್ದೇವೆ' ಎಂದಿದ್ದಾರೆ.

ಜತೆಗೆ, 'ವಿವಿಧ ದೇಶ ಮತ್ತು ರಾಜ್ಯಗಳಲ್ಲಿ ಸೋಂಕು ನಿಯಂತ್ರಣಕ್ಕೆ ಲಾಕ್‌ಡೌನ್ ಒಂದೇ ಪರ್ಯಾಯ ಮಾರ್ಗ ಎಂದು ನಿರ್ಧರಿಸಲಾಗಿದೆ. 10 ರಿಂದ 15 ದಿನ ಲಾಕ್‌ಡೌನ್ ಜಾರಿಗೆ ತಂದು ಸೋಂಕಿನ ಸರಪಳಿ ಕತ್ತರಿಸಲಾಗುತ್ತಿದೆ. ಸದ್ಯ ಮಹಾರಾಷ್ಟ್ರದಲ್ಲಿ 3 ದಿನಗಳ ಲಾಕ್‌ಡೌನ್ ಜಾರಿಗೊಳಿಸಲಾಗಿದೆ. ನಮ್ಮಲ್ಲಿಯೂ ಅಂತಹ ಪರಿಸ್ಥಿತಿ ಬಾರದಿರಲಿ' ಎನ್ನುವ ಮೂಲಕ ಸುಧಾಕರ್ ಪರೋಕ್ಷ ಎಚ್ಚರಿಕೆ ನೀಡಿದ್ದಾರೆ.

**ಮಹಾ ಲಾಕ್?:** ಇನ್ನೊಂದೆಡೆ, ಸೋಂಕು ಹೆಚ್ಚಿರುವ ಮಹಾರಾಷ್ಟ್ರದಲ್ಲೂ 15 ದಿನ ಲಾಕ್‌ಡೌನ್ ಹೇರಲು ಚಿಂತನೆ ನಡೆದಿದ್ದು, ಇನ್ನೆರಡು ದಿನಗಳಲ್ಲೇ ಅಂತಿಮ ನಿರ್ಧಾರ ಹೊರಬೀಳಲಿದೆ. ಸಿಎಂ ಉದ್ಧವ್ ಠಾಕ್ರೆ ವಿವಿಧ ಪಕ್ಷಗಳ ನಾಯಕರು, ತಜ್ಞರೊಂದಿಗೆ ಲಾಕ್‌ಡೌನ್ ಕುರಿತಂತೆ ಸರಣಿ ಸಭೆ ನಡೆಸಿದ್ದಾರೆ.

**ಪ್ರಧಾನಿ ಮೋದಿ ಜತೆ ಮಾತನಾಡಿ ಸೋಂಕು ನಿಯಂತ್ರಣಕ್ಕೆ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ನೀಡಿದ್ದೇನೆ. ಮೈಕ್ರೋ ಕಂಟೈನ್ಮೆಂಟ್ ಬಗ್ಗೆ ಹೆಚ್ಚಿನ ಗಮನ ಹರಿಸುವಂತೆ ಸಲಹೆ ನೀಡಿದ್ದಾರೆ.**

**ಬಿ.ಎಸ್.ಯಡಿಯೂರಪ್ಪ**, ಸಿಎಂ

**ಸದ್ಯಕ್ಕೆ ಲಾಕ್‌ಡೌನ್ ಅಗತ್ಯವಿಲ್ಲ. ವಾಣಿಜ್ಯ ಚಟುವಟಿಕೆಗೆ ಸಮಸ್ಯೆ ಆಗದಂತೆ ಕ್ರಮ ಅಗತ್ಯ. ಕಟ್ಟುನಿಟ್ಟಿನ ಕ್ರಮ ಜಾರಿಯಾಗಲಿ.**

**ಡಾ. ಸಿ.ಎನ್. ಮಂಜುನಾಥ್**,
ಜಯದೇವ ಆಸ್ಪತ್ರೆಯ ಮುಖ್ಯಸ್ಥ

### 10250 ಮಂದಿಗೆ ಸೋಂಕು, 40 ಸಾವು

ರಾಜ್ಯದಲ್ಲಿ ಭಾನುವಾರ ಸೋಂಕಿನ ಹೊಸ ಪ್ರಕರಣಗಳು ಬರೋಬ್ಬರಿ ಹತ್ತು ಸಾವಿರದ ಗಡಿದಾಟಿದೆ. ಈ ಪೈಕಿ ಬೆಂಗಳೂರಿನಲ್ಲಿಯೇ ಏಳೂವರೆ ಸಾವಿರ ಪ್ರಕರಣ ವರದಿಯಾಗಿದೆ. ಕೊರೊನಾ ಮೊದಲ ಅಲೆಯಲ್ಲಿ ಆರು ತಿಂಗಳ ನಂತರ ಕಾಣಿಸಿಕೊಂಡಿದ್ದ 10 ಸಾವಿರ ಪ್ರಕರಣಗಳು ಎರಡನೇ ಅಲೆಯಲ್ಲಿ ಒಂದೂವರೆ ತಿಂಗಳಲ್ಲೇ ವರದಿಯಾಗಿವೆ. ಆದರೆ, ಸಾವಿನ ಪ್ರಮಾಣ ಕಳೆದ ಬಾರಿಗೆ ಹೋಲಿಸಿದರೆ ಅರ್ಧದಷ್ಟು ಕಡಿಮೆ ಇರುವುದು ಸಮಾಧಾನಕರ ಸಂಗತಿ.